





ದಿನಾಂಕ: 11-09-2023 ರಂದು ಅಕ್ಟೋಬರ್ ಮೊದಲ ವಾರದಲ್ಲಿ ನಡೆಯುವ "ಪಶ್ಚಿಮ ಆಫ್ರಿಕಾದ  ಘಾನಾ" ದಲ್ಲಿ ನಡೆಯುವ ಅಂತರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನಕ್ಕೆ ಸಂಬಂಧಿಸಿದ ಸಿದ್ವತೆಗಾಗಿ ಪೂರ್ವಭಾವಿ ಸಭೆ ನವದೆಹಲಿಯಲ್ಲಿ ನಡೆಯಿತು. ಲೋಕಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ಅವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ವಿಧಾನ ಪರಿಷತ್ ಮಾನ್ಯ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಭಾಗಿಯಾಗಿದ್ದರು.



ದೇಶದ ಹಲವು ರಾಜ್ಯಗಳ ವಿಧಾನ ಸಭಾಧ್ಯಕ್ಷರು ಹಾಗೂ ಸಭಾಪತಿಗಳು ಪಾಲ್ಗೊಂಡಿದ್ದರು. ದೇಶದಲ್ಲೇ ಅತ್ಯಂತ ಹಿರಿಯ ಸದಸ್ಯರು ಎಂಬ ಕೀರ್ತಿಗೆ ಪಾತ್ರರಾದ ಸಭಾಪತಿ ಬಸವರಾಜ್ ಹೊರಟ್ಟಿ ಅವರು ತಮ್ಮ 43 ವರ್ಷದ ಅನುಭವಗಳನ್ನು ಈ ಸಭೆಯಲ್ಲಿ ಹಂಚಿಕೊಂಡು ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ವಿಧಾನಮಂಡಲದ ಪಾತ್ರ ಕುರಿತು ವಿಚಾರ ಮಂಡಿಸಿದರು. ಘಾನಾದ ಸಮಾವೇಶದಲ್ಲಿ ಈ ಬಗ್ಗೆ ಪ್ರಸ್ತಾಪಿಸಬೇಕಾಗಿರುವ ಅಂಶಗಳ ಮೇಲೆ ಮಾನ್ಯ ಬಸವರಾಜ ಹೊರಟ್ಟಿ ಬೆಳಕು ಚೆಲ್ಲಿದರು..